ಕಡುಕೆಂಪು ಬಣ್ಣದ ರೇಷ್ಮೆ ಸೀರೆಗೆ ಕೆನೆಬಣ್ಣದ ಅಂಚು. ಅದಕ್ಕೊಪ್ಪುವ ಕಡುಬಣ್ಣದ್ದೇ ರವಿಕೆ. ಹತ್ತು ಜನರ ಮುಂದೆ ಎದ್ದು ಕಾಣುವ ಈ ಸೀರೆಯ ಸೊಬಗಿಗೆ ಅಷ್ಟೇ ಅದ್ದೂರಿಯಾದ ಆಭರಣ ತೊಡದಿದ್ದರೆ ಹೇಗೆ? ಸಾಂಪ್ರದಾಯಿಕ ಲುಕ್ ಬರಬೇಕಾದರೆ ದೇವಾನುದೇವತೆಗಳ ಚಿತ್ರವಿರುವ ಒಡವೆಗಳನ್ನು ತೊಟ್ಟು ಸಂಭ್ರಮಿಸಬೇಕು. ದೈವತ್ವದ ಕಳೆ ಬರುವುದು ಆಗಲೇ.

ದೇವಾನುದೇವತೆಗಳು ಅದೃಶ್ಯರಾಗಿದ್ದರೂ ಇವರ ಕಲ್ಪನೆಯಲ್ಲೇ ಭಕ್ತಿಭಾವ ಅಡಗಿದೆ. ಇದೇ ದೇವತೆಗಳು ಒಡವೆಯಲ್ಲಿ ಅವತರಿಸಿ ಇದೀಗ ಫ್ಯಾಷನ್‌ಪ್ರಿಯರಿಗೆ ಅಭಯ ನೀಡುತ್ತಿದ್ದಾರೆ. ಒಡವೆಗಳಲ್ಲಿ ಲಕ್ಷ್ಮಿ, ಸರಸ್ವತಿ, ಗಣೇಶ ಮುಂತಾದ ದೇವರು ಕುಸುರಿ ಕೆತ್ತನೆಯಲ್ಲಿ ಒಡಮೂಡಿ ಸಂಪ್ರದಾಯ, ಪರಂಪರೆ, ಫ್ಯಾಷನ್ ಎಲ್ಲವನ್ನೂ ಅನಾವರಣಗೊಳಿಸುತ್ತಿದ್ದಾರೆ.

ಹಾಗೆ ನೋಡಿದರೆ ಆಭರಣದ ಮೇಲೆ ದೇವರ ಕೆತ್ತನೆಯ ಪರಿಕಲ್ಪನೆ ಇಂದು ನಿನ್ನೆಯದಲ್ಲ. ಬಾಲಿವುಡ್ ನಟಿ ಶ್ರೀದೇವಿ ತಮ್ಮ ಬಳಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಟೆಂಪಲ್ ಒಡವೆಗಳನ್ನು ಖರೀದಿಸಿಟ್ಟುಕೊಂಡಿದ್ದರು. ಇದನ್ನು ಸಿನಿಮಾಗಳಲ್ಲಿ ತೊಟ್ಟು ಪ್ರದರ್ಶನ ಮಾಡಿದ ಬಳಿಕ ಇಂಥ ಒಡವೆಗಳಿಗೆ ಎಲ್ಲಿಲ್ಲದ ಬೇಡಿಕೆಯೂ ಬಂತು. ಮುಂದೆ ಮದುವೆಗಳಿಗಾಗಿ ಮದುಮಗಳು ಈ ಒಡವೆಯ ಮೇಲೆ ಆಸಕ್ತಿ ತೋರಿಸಲಾರಂಭಿಸಿದ ಬಳಿಕ ಸಾಂಪ್ರದಾಯಿಕ ಒಡವೆ ಮತ್ತಷ್ಟು ಜನಪ್ರಿಯವೂ ಆಯಿತು.

ಇಷ್ಟೇ ಅಲ್ಲದೆ ಹಳೆಯ ಕಾಲದಲ್ಲೂ ದೇವಸ್ಥಾನಗಳಲ್ಲಿ ದೇವರ ಮೂರ್ತಿ ಮೇಲೆ ಹಾಕುವ ಒಡವೆಗಳಲ್ಲಿ, ಹಾರಗಳಲ್ಲಿ ದೇವರ ಚಿತ್ರವನ್ನೇ ಕೆತ್ತಲಾಗಿತ್ತು. ಮುಂದೆ ಇದು ಫ್ಯಾಷನ್‌ಲೋಕಕ್ಕೆ ಎಂಟ್ರಿಕೊಟ್ಟ ಮೇಲಂತೂ ಸಾಂಪ್ರದಾಯಿಕತೆಯನ್ನು ಬಿಡಲೊಲ್ಲದ ಆದರೆ ಆಧುನಿಕತೆಗೆ ತೆರೆದುಕೊಂಡಿರುವ ಮಹಿಳೆಯರು ತಾವು ಧರಿಸುವ ಹಾರ, ನೆಕ್ಲೇಸ್, ಬ್ರೇಸ್‌ಲೆಟ್, ಕಿವಿಯೋಲೆ, ಜುಮುಕಿಗಳ ಮೇಲೆ ದೇವರ ಕೆತ್ತನೆ ಬರುವ ಒಡವೆಗಳನ್ನು ಧರಿಸಿ ಫ್ಯಾಷನ್ ಮೆರೆಯಲಾರಂಭಿಸಿದರು.

ಹೀಗೆ ಪ್ರಚಲಿತಕ್ಕೆ ಬಂದ ದೇವಾನುದೇವತೆಗಳ ಒಡವೆಯನ್ನು ಭರತನಾಟ್ಯ ಕಲಾವಿದರೂ ಪ್ರೀತಿಸಲಾರಂಭಿಸಿದರು. ಇದಕ್ಕೆ 'ಟೆಂಪಲ್ ಒಡವೆ' ಎಂಬ ನಾಮಕರಣವೂ ಆಯಿತು. ಚಿನ್ನ ದುಬಾರಿ ಆಗಿರುವುದರಿಂದ ಭಾರ ಭಾರದ ಚಿನ್ನದೊಡವೆ ತೊಟ್ಟು ನೃತ್ಯ ಮಾಡುವುದು ಅಸಾಧ್ಯ ಎಂದು ಅರಿತ ಕಲಾವಿದರು, ಇದೇ ಮಾದರಿಯ ಆಭರಣವನ್ನು ವನ್ ಗ್ರಾಂ ಗೋಲ್ಡ್ ಹಾಗೂ ಇಮಿಟೇಷನ್ ಆಭರಣದಲ್ಲಿ ಇಷ್ಟಪಟ್ಟರು. ಅಲ್ಲಿಂದ ಮತ್ತೆ ಟೆಂಪಲ್ ಜ್ಯುವೆಲ್ಲರಿ ಆಭರಣ ಪ್ರಿಯರ ಫ್ಯಾಷನ್ ಟ್ರೆಂಡ್ ಕೂಡ ಆಯಿತು. ಅಲ್ಲದೆ ಎಲ್ಲ ವಯೋಮಾನದ ಮಹಿಳೆಯರನ್ನೂ ಆಕರ್ಷಿಸುವ ವಿಶಿಷ್ಟ ಒಡವೆ ಎಂದು ಜನಪ್ರಿಯವೂ ಆಯಿತು. ದೇವರ ಕೆತ್ತನೆ ಇರುವ ಆಭರಣ ಎಂದರೆ ಅದು ತಮಿಳುನಾಡಿನ ಸಾಂಪ್ರದಾಯಿಕ ಒಡವೆ ಶೈಲಿ. ಮಹಿಳೆಯರು ತಮಗಿಷ್ಟವಾದ ದೇವಾನುದೇವತೆಗಳ ಚಿತ್ರವಿರುವ ವಿನ್ಯಾಸದ ಪೆಡೆಂಟ್, ನೆಕ್ಲೇಸ್, ಕಿವಿಯೋಲೆ, ಹಾರ, ಸುಂದರ ಚಿತ್ತಾರಗಳ ಬಳೆಗಳನ್ನು ತೊಟ್ಟು ಮೆರೆಯಲಾರಂಭಿಸಿದ್ದಾರೆ. ತಮ್ಮ ಬಳಿ ಇರುವ ಹಳೆಯ ಒಡವೆಗಳನ್ನೂ ಆಧುನಿಕ ಸ್ಪರ್ಶದೊಂದಿಗೆ 'ಟೆಂಪಲ್ ಆಭರಣ' ವಿನ್ಯಾಸಗಳಲ್ಲಿಯೇ ಮಾಡಿಸಲು ಮುಂದಾಗಿದ್ದಾರೆ. ಇದನ್ನು ಮನಗಂಡ ಆಭರಣ ವರ್ತಕರು ಹತ್ತು ಹಲವು ವಿನ್ಯಾಸಗಳಲ್ಲಿ ಒಡವೆ ತಯಾರಿಸಿ ಇದರದೇ ಒಂದು ಪ್ರತ್ಯೇಕ ಶಾಖೆಯನ್ನೇ ತೆರೆಯಲಾರಂಭಿಸಿದ್ದಾರೆ.

**ಚಿನ್ನದ ಹಬ್ಬದಂದು ಖರೀದಿ ಜೋರು**

ಸಾಮಾನ್ಯವಾಗಿ ಟೆಂಪಲ್ ಒಡವೆಗಳನ್ನು ಚಿನ್ನದ ಹಬ್ಬವಾದ 'ಅಕ್ಷಯ ತೃತೀಯ'ದಂದು ಖರೀದಿಸುವುದು ವಾಡಿಕೆ. ದೇವರ ಚಿತ್ರಣವಿರುವ ಒಡವೆ ಹಬ್ಬಹರಿದಿನದಂದು ಧರಿಸಲೂ ಸೂಕ್ತ ಎಂಬುದು ಮಹಿಳೆಯರ ಅಭಿಮತವೂ ಹೌದು. ಅಲ್ಲದೆ ಹಬ್ಬದ ದಿನ ಸಾಂಪ್ರದಾಯಿಕ ಉಡುಗೆಗಳಾದ ಸೀರೆ, ಲೆಹಂಗಾ, ಸಲ್ವಾರ್, ಹಾಫ್ ಸ್ಯಾರಿ, ಪುಟ್ಟ ಹುಡುಗಿಯರು ಲಂಗ ದಾವಣಿ ತೊಟ್ಟಾಗ ಇಂಥ ಒಡವೆಗಳು ಹೆಚ್ಚು ಸೂಕ್ತ ಎನಿಸುತ್ತವೆ.

'ಉತ್ತರ ಭಾರತದಲ್ಲಿ ದುರ್ಗಾ ಪೂಜೆ ಸೇರಿದಂತೆ ನವರಾತ್ರಿ ಸಂಭ್ರಮ ಜೋರು. ದಾಂಡಿಯಾ ರಾತ್ರಿಗಳು ಎನ್ನಲಾಗುವ ಈ ದಿನಗಳಲ್ಲಿ ಮಹಿಳೆಯರು 'ಸ್ಟೇಟ್‌ಮೆಂಟ್ ಆಭರಣ' ಧರಿಸುತ್ತಾರೆ. ಈ ಒಡವೆಗಳಲ್ಲೂ ದೇವರ ಚಿತ್ರ ಇರುವುದು ವಿಶೇಷ. ಮಹಿಳೆಯರು ಹಸಿರು–ಹಳದಿ ಪ್ರಿಂಟ್ಸ್ ಇರುವ ಬಾಂದನಿ ಡ್ರೆಸ್, ಸ್ಲೀವ್‌ಲೆಸ್ ಸಾಲಿಡ್ ಬ್ಲ್ಯಾಕ್ ಕಲರ್ ಉಡುಪಿನ ಜತೆಗೆ ಸಿಲ್ವರ್ ಜಿಯೊಮೆಟ್ರಿಕ್ ಪ್ಯಾಟರ್ನ್ ಇರುವ ನೆಕ್‌ಪೀಸ್, ಸಿಲ್ವರ್ ಮೆಟಾಲಿಕ್ ಪೆಂಡೆಂಟ್, ನೆಕ್ಲೇಸ್, ವುಡನ್ ಬ್ಯಾಂಗಲ್ ಸೆಟ್, ಆ್ಯಂಟಿಕ್ ಫಿನಿಷ್ ಸಿಲ್ವರ್ ಟೆಂಪಲ್ ನೆಕ್ಲೇಸ್ ಮುಂತಾದವುಗಳನ್ನು ದಾಂಡಿಯಾ ರಾತ್ರಿಗೆ ಬಳಸುತ್ತಾರೆ' ಎನ್ನುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಜ್ಯುವೆಲ್ಲರಿ ವರ್ತಕ ಪವನ್ ಜುಂಜನ್‌ವಾಲ.

## ಕಾಸ್ಟ್ಯೂಮ್‌ನಲ್ಲೂ ಸಾಂಪ್ರದಾಯಿಕತೆ

ದೇವರ ಚಿತ್ರವಿರುವ ಒಡವೆ ಧರಿಸಿ ನೃತ್ಯ ಮಾಡುವುದು ಕೂಡ ಇತ್ತೀಚೆಗೆ ಜನಪ್ರಿಯವಾಗುತ್ತಿದೆ. ನೃತ್ಯ ಮಾಡುವಾಗ ಬಳಸುವ ಬೈತಲೆಬೊಟ್ಟು, ಸೊಂಟಪಟ್ಟಿ, ಡಾಬು, ವಂಕಿ ಎಲ್ಲದರಲ್ಲೂ ದೇವರ ಪ್ರತಿರೂಪವಿದ್ದರೆ ದೈವೀಕಲೆಗೆ ವಿಶೇಷ ಕಳೆಯೂ ಬರುತ್ತದೆ.

'ಕಳೆದ ಎಂಟು ವರ್ಷಗಳಿಂದ ಭರತನಾಟ್ಯ ಮಾಡುತ್ತಿದ್ದೇನೆ. ಪ್ರತಿ ಡ್ಯಾನ್ಸ್‌ಗೂ ಬೇರೆ ಬೇರೆ ಉಡುಪು ಒಡವೆ ಧರಿಸುವುದು ನನಗಿಷ್ಟ. ಅದರಲ್ಲೂ ಟೆಂಪಲ್ ಒಡವೆ ನಾಟ್ಯ ಕಾಸ್ಟ್ಯೂಮ್‌ಗೆ ಅತ್ಯಂತ ಸೂಕ್ತವಾದದ್ದು' ಎನ್ನುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ನೃತ್ಯ ಕಲಾವಿದೆ ಶ್ರೀವಾಣಿ.

ಉಡುಪಿನೊಂದಿಗೆ ಒಡವೆಯನ್ನು ಮ್ಯಾಚ್ ಮಾಡಿಕೊಂಡರೆ ಅಭಿನಯ, ಸಂಗೀತದ ಹಿತಮಿತವಾದ ಕಲೆಗೆ ವಿಶೇಷ ಮೆರುಗು ಕೂಡ ಬರುತ್ತದೆ.

